

ಏಷ್ಯಾದಲ್ಲಿ ಮೊದಲ ಬಾರಿಗೆ ವಿದ್ಯುತ್ ಸಂಪರ್ಕ ಪಡೆದ ನಗರ ಕೆಜಿಎಫ್. ವಿಶ್ವದಲ್ಲಿ ಗಣಿಗಳಿಗೆ ವಿದ್ಯುತ್ ಸಂಪರ್ಕ ಮೊದಲಿಗೆ ಸಿಕ್ಕಿದ್ದು ಇಲ್ಲೇ. ವಿದ್ಯುತ್ ಚಾಲಿತ ಟ್ರಾಮ್‌ಗಳು ಏಷ್ಯಾದಲ್ಲಿ ಮೊದಲು ಸಂಚರಿಸಿದ್ದು ಕೆಜಿಎಫ್‌ನಲ್ಲಿ – 1910ರಲ್ಲಿ. ಕಲ್ಕತ್ತಾ (ಇಂದಿನ ಕೋಲ್ಕತ್ತ) ಮತ್ತು ಮದ್ರಾಸ್‌ನಲ್ಲಿ (ಇಂದಿನ ಚೆನ್ನೈ) ವಿದ್ಯುತ್ ಟ್ರಾಮ್‌ಗಳು ಸಂಚಾರ ಆರಂಭಿಸಿದ್ದು ನಂತರದ ವರ್ಷಗಳಲ್ಲಿ. ಗಣಿ ಚಟುವಟಿಕೆಗಳು ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಾಗ ಅಲ್ಲಿ 35 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಏಷ್ಯಾದ ಇತರ ಯಾವುದೇ ಲೋಹದ ಗಣಿಗಾರಿಕೆ ಪ್ರದೇಶಗಳಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ಕೆಲಸ ಮಾಡಿದ ದಾಖಲೆ ಇಲ್ಲ ಎಂದು 'ಕೋಲಾರ್ ಗೋಲ್ಡ್ ಫೀಲ್ಡ್' ಗ್ರಂಥದಲ್ಲಿ ಡಾ. ಎಸ್. ಶ್ರೀಕುಮಾರ್ ಉಲ್ಲೇಖಿಸಿದ್ದಾರೆ.

ಹೀಗಿದ್ದ ಕೆಜಿಎಫ್ ಈಗ ತನ್ನ ಅಸ್ತಿತ್ವಕ್ಕಾಗಿ ಬೆಂಗಳೂರನ್ನು ಅವಲಂಬಿಸಿದೆ. ಚಿನ್ನದ ಗಣಿಯ ನರನಾಡಿಗಳಂತೆ ಇದ್ದ ಹಳಿಗಳು ಇಂದು ಅಲ್ಲಿನ ಜನರ ಬದುಕಿನ ನರನಾಡಿಗಳೂ ಆಗಿವೆ. ಕೆಜಿಎಫ್ ಪ್ರದೇಶದಿಂದ ಬೆಂಗಳೂರಿಗೆ ರೈಲು ಸಂಚಾರ ಬೆಳಿಗ್ಗೆ ನಾಲ್ಕೂವರೆಯಿಂದಲೇ ಆರಂಭ ಆಗುತ್ತದೆ. ಅಂದಾಜು ಹತ್ತು ಸಾವಿರ ಜನ ಅಲ್ಲಿಂದ ಬೆಂಗಳೂರಿಗೆ ಕೆಲಸ ಮಾಡಲು ಬರುತ್ತಾರೆ. ಒಂದಿಷ್ಟು ಕಾಸು ಸಂಪಾದಿಸಿ, ಊರಿಗೆ ಮರಳುತ್ತಾರೆ. ಕೆಜಿಎಫ್‌ನಲ್ಲಿನ ಬಹುತೇಕ ವ್ಯಾಪಾರ ಚಟುವಟಿಕೆಗಳು ನಡೆಯುವುದು ಅಲ್ಲಿನವರು ಬೆಂಗಳೂರಿನಲ್ಲಿ ದುಡಿದು ಸಂಪಾದಿಸುವ ಹಣದಿಂದ ಎನ್ನುತ್ತಾರೆ ಸ್ಥಳೀಯರಾದ ಮುನಿರತ್ನಂ.

ಪ್ರತಿದಿನ ಮೂವತ್ತಕ್ಕೂ ಹೆಚ್ಚು ರೈಲುಗಳು ಕೆಜಿಎಫ್, ಬಂಗಾರಪೇಟೆ

## ಸಾಯದ ಕನಸು

ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ (ಬಿಜಿಎಂಎಲ್) ಗಣಿಗಾರಿಕೆ ಸ್ಥಗಿತಗೊಳಿಸಿದ ಸಂದರ್ಭದಲ್ಲಿ ಹತ್ತು ಗ್ರಾಂ ಚಿನ್ನ ಪಡೆಯಲು ತಗಲುತ್ತಿದ್ದ ವೆಚ್ಚ ಅಂದಾಜು 20 ಸಾವಿರ ರೂಪಾಯಿ. ಆದರೆ ಅಂದು (2001ರಲ್ಲಿ) ಇದ್ದ ಮಾರಾಟದ ಬೆಲೆ ಬರೀ 4,500 ರೂಪಾಯಿ. ಹಾಗಾಗಿ, ಉತ್ಪಾದನಾ ವೆಚ್ಚ ಮತ್ತು ಮಾರಾಟ ಆದಾಯದ ನಡುವೆ ಸಮತೋಲನ ಸಾಧ್ಯವಾಗಿರಲಿಲ್ಲ. ಆದರೆ ಈಗ ದೇಸಿ ಮಾರುಕಟ್ಟೆಯಲ್ಲಿ ಹತ್ತು ಗ್ರಾಂ ಚಿನ್ನದ ಬೆಲೆ 30 ಸಾವಿರ ರೂಪಾಯಿ ಆಸುಪಾಸಿನಲ್ಲಿ ಸ್ಥಿರವಾಗಿದೆ. ಮಾರುಕಟ್ಟೆಯಲ್ಲಿ ಚಿನ್ನಕ್ಕೆ ಲಭಿಸುತ್ತಿರುವ ಈ ಬೆಲೆಯೇ, ಗಣಿ ಮತ್ತೆ ಜೀವ ಪಡೆದುಕೊಳ್ಳಬಹುದು ಎಂಬ ಆಸೆಯನ್ನು ಕೆಜಿಎಫ್ ಕಾರ್ಮಿಕರಲ್ಲಿ ಜೀವಂತವಾಗಿ ಇರಿಸಿದೆ. ಚುನಾವಣೆ ಹತ್ತಿರವಾದಾಗಲೆಲ್ಲ ಗಣಿ ಪುನಶ್ಚೇತನದ ಮಾತುಗಳು ಮುನ್ನೆಲೆಗೆ ಬರುತ್ತವೆ. ಚುನಾವಣೆ ಮುಗಿದ ನಂತರ ಮರೆಗೆ ಸರಿಯುತ್ತವೆ.




ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880533337

